

# ಪ್ರೊ. (ಡಾ.) ಪಿ. ಈಶ್ವರ ಭಟ್

ಕಾನೂನು ವೃತ್ತಿಯನ್ನು ಜೀವನ ಪಥವಾಗಿ ಬೆಳೆಸಿ ಕಟ್ಟುವವರಿಗೆ ಗಂಭೀರ ಓದುವಿಕೆಯ ಕಾನೂನು ಶಿಕ್ಷಣವು ಒಂದು ಅನಿವಾರ್ಯ ಸಾಧನ. ನ್ಯಾಯದ ಹೊಸ್ತಿಲಿಗೆ ಹೋಗಲು ಕಾನೂನು ವೃತ್ತಿಯು ದಾರಿ ತೋರುತ್ತದೆಯಾದ್ದರಿಂದ ಕಾನೂನು ಶಿಕ್ಷಣದ ಫಲಾನುಭವಿಗಳು ವಿವಿಧ ರೀತಿಯ ಕಾನೂನೀನ ಸೇವೆಯನ್ನು ಕೊಡುತ್ತಾ ಒಟ್ಟಾರೆ ಸಮಾಜವನ್ನು ಸಶಕ್ತಗೊಳಿಸುವ ಜವಾಬ್ದಾರಿಯನ್ನು ಹೊತ್ತಿದ್ದಾರೆ.

ಹುಬ್ಬಳ್ಳಿಯಲ್ಲಿರುವ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಜಾಲತಾಣಕ್ಕೆ ಭೇಟಿ ನೀಡುವ ಪ್ರತಿಯೊಬ್ಬ ವಿದ್ಯಾರ್ಥಿಗೂ ಸಂದರ್ಶಕರಿಗೂ ನಾನು ತುಂಬು ಹೃದಯದ ಸ್ವಾಗತವನ್ನು ಬಯಸುತ್ತೇನೆ. ಈ ಜಾಲತಾಣವು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಎಲ್ಲ ಚಟುವಟಿಕೆಗಳ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ವಿವರ ಮತ್ತು ಸಂಶೋದನಾ ಪ್ರಕಟಣೆಗಳ ಮಾಹಿತಿಯನ್ನು ಸಂದರ್ಶಕರಿಗೆ ನೀಡುತ್ತದೆ. ಕಾನೂನು ಶಿಕ್ಷಣಕ್ಕೆ ಸಂಬಂಧಿಸಿದ, ಪ್ರಮುಖವಾದ ಮತ್ತು ಕಾರ್ಯಗತಗೊಳಿಸಬೇಕಾದ ಮಾಹಿತಿಗಳನ್ನು ಬಿತ್ತರಿಸುವ ಈ ಜಾಲತಾಣವು ವಾಸ್ತವಪ್ರಾಯದ ತಿಳುವಳಿಕೆ ಫಲಕವೇ ಆಗಿದೆ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವನ್ನು ಕರ್ನಾಟಕ ಸರಕಾರವು ೨೦೦೯ರಲ್ಲಿ ಸ್ಥಾಪಿಸಿತು. ಕಾನೂನು ಕ್ಷೇತ್ರದಲ್ಲಿ ವ್ಯವಸ್ಥಿತ ಅಧ್ಯಯನ ಬೋಧನೆ, ತರಬೇತಿ, ಸಂಶೋದನೆ ಮತ್ತು ಕೌಶಲ್ಯವೃದ್ಧಿ ಮಾಡುತ್ತಾ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ನ್ಯಾಯಗಳಿಗೆ ಹಾಗೂ ಪ್ರಜಾಪ್ರಭುತ್ವದ ವ್ಯವಸ್ಥೆಗೆ ತುಂಬು ಕೊಡುಗೆ ನೀಡುವ ಮಹದುದ್ದೇಶಕ್ಕೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ತನ್ನನ್ನು ತಾನು ತೊಡಗಿಸಿಕೊಂಡಿದೆ. ಸಮರ್ಥ ಕಾನೂನು ಪದವೀಧರರನ್ನು ತಯಾರು ಮಾಡುವ, ಕಾನೂನಿನ ಅರಿಯುವಿಕೆಯನ್ನು ಹಬ್ಬಿಸುವ, ನ್ಯಾಯಾಲಯಗಳಿಗೆ ತರಬೇತಿಯನ್ನಿಯುವ, ನ್ಯಾಯದಾನದ ಬದಲೀ ಮಾರ್ಗಗಳನ್ನು ಸುಗಮಗೊಳಿಸುವ ಮತ್ತು ಕಾನೂನು ಪೂರಕ ಸೇವಕರನ್ನು ಸಿದ್ದಗೊಳಿಸುವ ಉದ್ದೇಶಗಳನ್ನು ಕರ್ನಾಟಕ

ರಾಜ್ಯ ಕಾನೂನು ವಿಶ್ವವಿದ್ಯಾಲಯವು ಹೊಂದಿದೆ. ಕಳೆದ ಒಂದು ದಶಕದಲ್ಲಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಕಾನೂನು ಶಿಕ್ಷಣದ ಕ್ಷೇತ್ರದಲ್ಲಿ ಕರ್ನಾಟಕದ ಉದ್ದಗಲಕ್ಕೂ ವ್ಯಾಪಿಸಿದ ಕೇಂದ್ರ ಬಿಂದುವಾಗಿದೆ. ೧೦೬ ಸಂಯೋಜಿತ ಕಾನೂನು ಮಹಾವಿದ್ಯಾಲಯಗಳಲ್ಲಿ ಅಂದಾಜು ೨೬,೦೦೦ ವಿದ್ಯಾರ್ಥಿಗಳು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಕಲಿಯುತ್ತಿದ್ದಾರೆ. ಇದಲ್ಲದೆ ತನ್ನದೆ ಆದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಕಾನೂನು ಶಾಲೆಯನ್ನು ಇದು ಹೊಂದಿದೆ. ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಎಲ್ಎಲ್.ಬಿ. (೩ವರ್ಷ); ಬಿ.ಎ.,ಎಲ್ಎಲ್.ಬಿ, ಬಿ.ಬಿ.ಎ.,ಎಲ್ಎಲ್.ಬಿ; ಬಿ.ಕಾಮ್.,ಎಲ್ಎಲ್.ಬಿ. (೫ವರ್ಷ) ಮತ್ತು ಬಿ.ಎ.,ಎಲ್ಎಲ್.ಬಿ. ಮತ್ತು ಬಿ.ಬಿ.ಎ.ಎಲ್ಎಲ್.ಬಿ. (ಹಾನರ್ಸ್ ೫ವರ್ಷ) ಕೋರ್ಸುಗಳನ್ನು, ವಿವಿಧ ವಿಷಯಗಳಲ್ಲಿ ಎಲ್ಎಲ್.ಎಂ. ಮತ್ತು ಪಿಹೆಚ್.ಡಿ. ಪದವಿಗಳಿಗೆ ಮತ್ತು ಹಲವಾರು ವಿಷಯಗಳಲ್ಲಿ ಸರ್ಟಿಫಿಕೇಟ್ ಮತ್ತು ಡಿಪ್ಲೊಮಾ ಶಿಕ್ಷಣವನ್ನು ನೀಡುತ್ತದೆ.

ವೃತ್ತಿ ತರಬೇತಿ, ಕಾನೂನು ನೆರವು ಚಟುವಟಿಕೆ, ಚರ್ಚಾಕೂಟ, ಭಾಷಾ ಕೌಶಲ್ಯವೃದ್ಧಿಗಳಿಗೆ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ವಿಶೇಷ ಉತ್ತೇಜನ ನೀಡುತ್ತದೆ. ಸುಸಜ್ಜಿತವಾದ ಗ್ರಂಥಾಲಯವಿದ್ದು ವಿಶ್ವವಿದ್ಯಾಲಯವು ಸಂಶೋಧನೆಗೆ ಪ್ರೋತ್ಸಾಹ ನೀಡುತ್ತದೆ. ಜಲ ಕಾನೂನು ಮತ್ತು ಸಾಂವಿಧಾನಿಕ ಕಾನೂನು ಕ್ಷೇತ್ರಗಳಲ್ಲಿ ಸಂಶೋಧನೆ ಮಾಡುವ ೨ ಸಂಶೋಧನಾ ಕೇಂದ್ರಗಳನ್ನು ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಹೊಂದಿದೆ. ನಿಯತಕಾಲಿಕೆಗಳಾದ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯದ ಲಾ ಜರ್ನಲ್, ಸ್ಟೂಡೆಂಟ್ ಲಾ ರಿವ್ಯೂ ಇತ್ಯಾದಿಗಳು ಸಂಶೋಧನಾ ಲೇಖನಗಳಿಂದ ಕೂಡಿ ಕ್ಲಪ್ತವಾಗಿ ಪ್ರಕಟಗೊಳ್ಳುತ್ತಿವೆ. ಅಣುಕು ನ್ಯಾಯಾಲಯ ಮತ್ತಿತರ ಸ್ಪರ್ಧೆಗಳು ಮತ್ತು ದತ್ತಿ ಉಪನ್ಯಾಸಗಳು ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿ ಕಾರ್ಯವೆಸಗುತ್ತಿವೆ. ಕಾನೂನು ಕಲಿಯುವಿಕೆಯಲ್ಲಿ ದ್ವಿಭಾಷಾ ನೀತಿಯನ್ನು ಅನುಸರಿಸಲಾಗಿದ್ದು ವಿಶ್ವವಿದ್ಯಾಲಯವು ಸಾಮಾನ್ಯ ದರ್ಜೆಯ ನಾಗರಿಕರನ್ನು ವ್ಯಾಪಕವಾಗಿ ತಲಪುತ್ತದೆ. ಕರ್ನಾಟಕ ಸರಕಾರವು ಸ್ಥಾಪಿಸಿದ ವಿಜ್ಞಾನೇಶ್ವರ ಅಧ್ಯಯನ ಪೀಠವು ಪರಂಪರೆಗೂ ಪ್ರಸ್ತುತ ಸಮಾಜಕ್ಕೂ ಇರುವ ಕೊಂಡಿಗಳನ್ನು ಗುರುತಿಸುವ ಅಧ್ಯಯನ ಮಾಡಲು ಗುರಿಯಿಟ್ಟಿದೆ.

ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ ಪಠ್ಯೇತರ ಚಟುವಟಿಕೆಗಳಾದ ಕ್ರೀಡೆ, ರಾಷ್ಟ್ರೀಯ ಸೇವಾ ಯೋಜನೆ, ರೆಡ್‌ಕ್ರಾಸ್, ಯುವಹಬ್ಬ ಇತ್ಯಾದಿಗಳನ್ನು ಆಯೋಜಿಸುತ್ತದೆ. ವಲಯ ಮತ್ತು ವಿಶ್ವವಿದ್ಯಾಲಯದ ಮಟ್ಟದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಸಂಘಟಿಸುತ್ತದೆ. ವಿಶ್ವವಿದ್ಯಾಲಯವು ೫೪ ಎಕರೆಯಷ್ಟು ಹಿರಿದಾದ ವಿಶಾಲ ಕ್ಯಾಂಪಸ್‌ನಲ್ಲಿ ಆಕರ್ಷಕವಾದ ಲಾಸ್ಕೂಲ್ ಕಟ್ಟಡ, ಹುಡುಗರ ಮತ್ತು ಹುಡುಗಿಯರ ವಸತಿನಿಲಯ, ಬೋಧಕ ವರ್ಗ ಮತ್ತು ಅಧಿಕಾರಿಗಳ ವಸತಿಗಳು, ಆಡಳಿತ ವಿಭಾಗ, ಗ್ರಂಥಾಲಯ, ಪರೀಕ್ಷಾಭವನ ಇತ್ಯಾದಿ ಕಟ್ಟಡಗಳನ್ನು ಹೊಂದಿದೆ. ಅದು ಕ್ರೀಡಾ ಸಮುಚ್ಚಯವನ್ನು ನಿರ್ಮಿಸುವ ಉದ್ದೇಶವನ್ನು ಹೊಂದಿದೆ. ಒಟ್ಟಿನಲ್ಲಿ ಕಾನೂನು ಶಿಕ್ಷಣಕ್ಕೆ ಬೇಕಾದ ಸರ್ವಾಂಗೀಣ ಸವಲತ್ತನ್ನು ಹೊಂದಿ ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯವು ಕಾನೂನು ಕಲಿಯುವಿಕೆಯ ಅತ್ಯುನ್ನತ ವಾತಾವರಣವನ್ನು ಹೊಂದಿದೆ.

ಪ್ರಿಯ ಸಂದರ್ಶಕರೇ, ನಿಮ್ಮ ಶೈಕ್ಷಣಿಕ ಪ್ರಯತ್ನಕ್ಕೆ ಶುಭವಾಗಲಿ.